ಚಾಲುಕ್ಯರು ಇವರ ಕಾಲದಲ್ಲಿ ಇದು ಕೆಲಮಟ್ಟಿಗೆ ಇತ್ತು. ಅದರಲ್ಲೂ ವಿಜಯನಗರದಲ್ಲಿ ಅತ್ಯಧಿಕ ಬಲಿಗಳು ಸಂಭವಿಸಿದವು. ವಿಚಿತ್ರವೆಂದರೆ, ಹೀಗೆ ಸತ್ತವರಲ್ಲಿ ಒಬ್ಬರೇ ಒಬ್ಬರು ಕ್ಷತ್ರಿಯ ಕುಲಕ್ಕೆ ಸಂಬಂಧಿಸಿದವರು ಇಲ್ಲ. ಒಂದೇ ಒಂದು ಉದಾಹರಣೆ ಶಾಸನ ಒಂದರಲ್ಲಿ ಸಿಗುತ್ತದೆ. ಕದಂಬರ ದೊರೆ ರಾಜಾರವಿರ್ಮನ ಹೆಂಡತಿ ಸತಿ ಸಹಗಮನಕ್ಕೆ ಒಳಗಾದಳು ಅಂತ. ಶಾಸನ ತ್ರುಟಿತವಾಗಿರೋದರಿಂದ ಅದು ಕೂಡ ಅಷ್ಟು ನಂಬಲರ್ಹವಾದ ಮಾಹಿತಿಯಲ್ಲ. ರಾಷ್ಟ್ರಕೂಟ, ಚಾಲುಕ್ಯರಲ್ಲಿ ಅಷ್ಟಾಗಿ ಕಾಣಿಸುವುದಿಲ್ಲ. ಗುಂಡಮಬ್ಬೆ ಕುರಿತು ಇಂಥದ್ದೊಂದು ಅಭಿಪ್ರಾಯವಿದೆ. ಆಕೆ ಸತಿಯಾದಳು ಅಂತ. ವೀರಗಲ್ಲುಗಳನ್ನೆ ನೋಡಿ. ಸತ್ತು ಹೋದವರಲ್ಲಿ ಹೆಚ್ಚು ಇರೋರು ಯಾರು ಅಂದರೆ ಹೋರಾಟಗಾರರು. ಸಾಮಾನ್ಯವಾಗಿ ಎಲ್ಲಾ ಕೆಳವರ್ಗದವರು. ಇದನ್ನು ಜಾರಿಗೆ ತರಲಿಕ್ಕೆ ಯಾವ ಪುರೋಹಿತಶಾಹಿ ವ್ಯವಸ್ಥೆ ಕಾರಣವಾಗಿತ್ತೊ ಆ ಸಮಾಜದಿಂದ ಒಬ್ಬರೇ ಒಬ್ಬರು ಬಲಿಯಾಗಲಿಲ್ಲ. ಇದರರ್ಥ ಅವರು ಆಗಬೇಕು ಅಂತಲ್ಲ. ನಾನು ಹೇಳ್ತಾ ಇರೋದು ಪುರುಷಪ್ರಧಾನ ವ್ಯವಸ್ಥೆ ಮತ್ತು ಪುರೋಹಿತಶಾಹಿ ವ್ಯವಸ್ಥೆ ಬಹಳ ಜಾಣ್ಮೆಯಿಂದ ಇದನ್ನು ನಿಭಾಯಿಸಿಕೊಂಡು ಬಂದವು. ಇದಕ್ಕಾಗಿ ಇಂಥ ಆಚರಣೆಯನ್ನು ಅನೇಕ ಶಾಸನಗಳು ಹೊಗಳಿದವು. ಇವುಗಳನ್ನು ಬಲಿದಾನವೆಂದು ಕರೆದು ವೈಭವೀಕರಿಸಿದವು. ಅವರು ಸತ್ತರೆ ಸ್ವರ್ಗ, ಅಲ್ಲಿ ಸುರಾಂಗನೆಯರು ಸಿಗುತ್ತಾರೆ ಅನ್ನೋ ಪ್ರಲೋಭನೆ ಹುಟ್ಟುಹಾಕಲಾಯಿತು. ಬದುಕಿದರೆ ಕೀರ್ತಿ, ಸಂಪತ್ತು ಎಂಬ ಭ್ರಮೆ ಹುಟ್ಟುಹಾಕಿದವು. ಇದೆಲ್ಲವನ್ನು ನೋಡಿದಾಗ ಮುಗ್ಧ ಸೈನಿಕರು ಮತ್ತವರ ಹೆಂಡತಿಯರು ಹೇಗೆ ಬಲಿಯಾದರು ಅನ್ನೋದು ಗೊತ್ತಾಗುತ್ತೆ. ಇವೆಲ್ಲ ನನಗೆ ಹೊಸ ಆಕರಗಳಾಗಿ ಕಂಡವು. ಸಾಮಂತರು, ಪಾಳೆಪಟ್ಟಿನ ಅರಸರು ಬೆಳೆದು ಬಂದಂತೆ ಇದು ಇನ್ನಷ್ಟು ಹೆಚ್ಚಾಯಿತು. ಹಳ್ಳಿಯಿಂದ ಒಬ್ಬ ಯುವಕ ಅನಿವಾರ್ಯವಾಗಿ ಸೈನ್ಯ ಸೇರಬೇಕಾಯಿತು. ಆದರೆ, ಜನಪದದ ಅನೇಕ ಕಥೆಗಳು ಇದಕ್ಕೆ ತಮ್ಮದೇ ರೀತಿಯಲ್ಲಿ ದೊಡ್ಡ ವಿರೋಧ ಸೂಚಿಸಿದ್ದಾವೆ. ಅನೇಕ ಶಕುನಗಳು ಅವನನ್ನು ಯುದ್ಧಕ್ಕೆ ಹೋಗದಂತೆ ತಡೆಯುತ್ತವೆ. ಆದರೆ, ಪುರೋಹಿತರು ಅವರು ಯುದ್ಧಕ್ಕೆ ಹೋಗುವಂತೆ ಹುರಿದುಂಬಿಸಿದರು. ದೇಸಿ ಶಕುನಗಳು ಅಪಾಯದ ಮುನ್ಸೂಚನೆ ಕೊಡುತ್ತವೆ. ಅಲ್ಲದೆ, ಸೈನಿಕರನ್ನು ಮದುವೆಯಾಗಬೇಡಿರೆಂದು ಅನೇಕ ದೇಸಿ ಶಕುನಗಳು ಹೆಣ್ಣುಮಕ್ಕಳಿಗೆ ಎಚ್ಚರಿಕೆ ಕೊಟ್ಟಿವೆ. ಅವನು ಯುದ್ಧಕ್ಕೆ ಹೋಗಿ ಹತನಾಗುತ್ತಾನೆ. ಆಮೇಲೆ ಇವಳು ಹೊಂಡಕ್ಕೆ ಬಿದ್ದು ಸತಿಯಾಗುತ್ತಾಳೆ. ಪುರೋಹಿತಶಾಹಿ ವ್ಯವಸ್ಥೆ ಅವಳು ಸ್ವರ್ಗಕ್ಕೆ ಹೋದಳೆಂದು ಹೇಳಿದರೆ ಯಾವ ಜನಪದ ಕಥೆಗಳು ಕೂಡ ಅವಳು ಸ್ವರ್ಗಕ್ಕೆ ಹೋದಳೆಂದು ಹೇಳುವುದಿಲ್ಲ. ಈ ಸಮುದಾಯಗಳಲ್ಲಿ ಸ್ವರ್ಗದ ಕಲ್ಪನೆಯೇ ಇಲ್ಲ. ಭೂಮಿಯ ಕಲ್ಪನೆಯೇ ಅವರಿಗೆ ಪ್ರಧಾನ. ಅವಳು ಮಾತೃದೇವತೆಯಾದಳು. ಆಕೆ ಫಲವತ್ತತೆಯ ದೈವ ಆಗಿಬಿಟ್ಟಳು. 'ನಮಗೊಂದು ಮಕ್ಕಳ ಕೊಡವ್ವ' ಎಂದು ತಾಯಂದಿರು ಪೂಜಿಸತೊಡಗಿದರು. ಇದು ಸಮುದಾಯಗಳ ಕಲ್ಪನೆ. ಸಮುದಾಯಗಳಲ್ಲಿ ಎಲ್ಲಾ ಮಹಾಸತಿಯರು ಮಕ್ಕಳು ಕೊಡುವ ದೇವತೆಗಳಾಗಿಬಿಟ್ಟಿದ್ದಾರೆ. ತೊಟ್ಟಿಲು ಕಟ್ಟುವ ಆಚರಣೆಯೇ ಇಲ್ಲಿ ಮುಖ್ಯವಾದದ್ದು. ಅಂದರೆ, ಒಂದು ವಿಷಾದವನ್ನು, ದುಃಖವನ್ನು ಹೇಗೆ ಪರಿವರ್ತಿಸಿಕೊಂಡ್ರು ಅನ್ನೋದನ್ನು ಗಮನಿಸಬೇಕು. ಒಂದು ಮೈನಾರಿಟಿ ಗುಂಪು ತಮ್ಮ ಅಸ್ತಿತ್ವಕ್ಕಾಗಿ ಸಮುದಾಯಗಳನ್ನು ಹೇಗೆ ವಂಚಿಸ್ತದೆ ಅನ್ನೋದು ನನಗೆ ಸತಿ ಅಧ್ಯಯನದಲ್ಲಿ ಕಾಣಿಸ್ತಾ ಹೋಯಿತು. ಇವರು ಹೋರಾಟ ಮಾಡಿ ವೀರರಾದರು ಅಂತಲ್ಲ. ಚರಿತ್ರೆಯನ್ನ ಭಿನ್ನ ಕ್ರಮಗಳಿಂದ ನೋಡಬೇಕಾಗಿದೆ. ಈ ಸಂಕಟ, ಇದರ ಅನಿವಾರ್ಯತೆ, ಸಮುದಾಯ ನಿಜಕ್ಕೂ ಇದನ್ನ ಒಪ್ಪಿಕೊಳ್ತಾ? ಇದನ್ನೆಲ್ಲ ನೋಡಬೇಕು. ಅನೇಕರು ಯುದ್ಧಕ್ಕೆ ಬೆನ್ನು ಕೊಟ್ಟು ಓಡಿಹೋದ್ರು. ಅನೇಕ ಹೆಣ್ಣುಮಕ್ಕಳು ಸತಿಯಾಗಲು ನಿರಾಕರಿಸಿದ್ರು. ಅವರ ಆತಂಕವನ್ನು ಶಾಸನಗಳು ದಾಖಲಿಸಲಿಕ್ಕೆ ಹೋಗಲಿಲ್ಲ. ಆದರೆ, ಜನಪದ ಕಥೆಗಳು, ಹಾಡುಗಳು ದಾಖಲಿಸಿದವು. ಇದೆಲ್ಲ ಒಂದು ದುರಂತ